ಏರತೊಡಗಿ ಎದೆ ನಗಾರಿಯಂತೆ ಡವಗುಟ್ಟತೊಡಗಿತು. ನನ್ನ ಆತ್ಮವಿಶ್ವಾಸ ಪಲಾಯನಗೈದಿತ್ತು. ಕತ್ತಲು ನನ್ನನ್ನು ಅಮರಿಕೊಳ್ಳಲು ಧಾವಿಸಿ ಬರುತ್ತಲೇ ಇತ್ತು. ಉರಿಯುತ್ತಿರುವ ಬತ್ತಿಯನ್ನು ಕೈಯಲ್ಲಿ ಹಿಡಿದು ನಾನು ತಲೆ ಕತ್ತರಿಸಿದ ಕೋಳಿಯಂತೆ ಬತ್ತಿಯಿಂದ ಬತ್ತಿಯ ಕಡೆಗೆ ಓಡಾಡತೊಡಗಿದೆ...

ಹುಚ್ಚು ಧಾವಂತದ ಓಡಾಟದಲ್ಲಿ ಮೇಜಿಗೆ ಡಿಕ್ಕಿ ಹೊಡೆದು ತೊಡೆಗೆ ಏಟು ಮಾಡಿಕೊಂಡೆ. ಮಂಡಿ ಕುರ್ಚಿಗೆ ಬಡಿದು ತರಚು ಗಾಯವಾಯಿತು. ಬತ್ತಿಗಳನ್ನು ಉರಿಸಲು ಕೈಯಲ್ಲಿಟ್ಟುಕೊಂಡಿದ್ದ ಬತ್ತಿ ಎಲ್ಲೋ ಹಾರಿ ಬಿದ್ದು ಎಲ್ಲಾ ಬೆಳಕು ನಂದಿ ಹೋಯಿತು. ಆದರೂ ಕೋಣೆಯ ಛಾವಣಿ ಕೆಂಪು ಬೆಳಕನ್ನು ಸೂಸುತ್ತಾ ನೆರಳುಗಳು ನನ್ನನ್ನು ಮುತ್ತಿಕೊಳ್ಳದಂತೆ ದೂರ ಮಾಡಿತು. ಬೆಂಕಿಗೂಡು ಇನ್ನೂ ಉರಿಯುತ್ತಲಿತ್ತು. ನಂದಿ ಹೋಗಿದ್ದ ಮೇಣದ ಬತ್ತಿಯನ್ನು ಬೆಂಕಿಗೂಡಿಗೆ ತೂರಿಸಿದೆ. ಒಮ್ಮೆಲೆ ಬೆಂಕಿಯ ಜ್ವಾಲೆ ನಂದಿ ಹೋಯಿತು. ಇದ್ದಬದ್ದ ಬೆಳಕೂ ಕ್ಷೀಣಿಸಿ ಸುತ್ತಲೂ ಕತ್ತಲು ಕವಿಯಿತು. ಬತ್ತಿ ನನ್ನ ಕೈಯಿಂದ ಜಾರಿ ಬೆಂಕಿ ಗೂಡೊಳಗೆ ಬಿದ್ದಿತು. ನನ್ನ ಎದುರು ಗವ್ವೆಂದು ಕತ್ತಲು ಕವಿಯಿತು. ನಾನು ಕೈಗಳನ್ನು ಬೀಸುತ್ತಾ ಎದ್ದು ನಿಂತು ಜೋರಾಗಿ ಚೀರಿದೆ. ಒಂದು ಬಾರಿಯಲ್ಲ. ಎರಡು ಬಾರಿಯಲ್ಲ. ಮೂರು ಬಾರಿ. ಆ ಕ್ಷಣಕ್ಕೆ ನನಗೆ ಬಾಗಿಲ ಹೊರಗೆ ಪಡಸಾಲೆಯಲ್ಲಿ ಬೆಳದಿಂಗಳು ಹರಡಿರುವುದು ನೆನಪಿಗೆ ಬಂದಿತು. ನಾನು ಕೈಗಳನ್ನು ಗಾಳಿಯಲ್ಲಿ ಬೀಸುತ್ತಾ ತಲೆ ತಗ್ಗಿಸಿ ಬಾಗಿಲೆಡೆಗೆ ನುಗ್ಗಿದೆ.

ಆದರೆ, ಗಾಬರಿಯಲ್ಲಿ ಬಾಗಿಲು ಎಲ್ಲಿದೆ ಎಂದೇ ಮರೆತುಬಿಟ್ಟಿದ್ದೆ. ಓಡುವ ಭರದಲ್ಲಿ ಮಂಚದ ಕಾಲಿಗೆ ಜೋರಾಗಿಯೇ ಡಿಕ್ಕಿ ಹೊಡೆದು ಮುಗ್ಗರಿಸಿ ಮತ್ತೆ ಯಾವುದೋ ಪೀಠೋಪಕರಣಕ್ಕೆ ತಲೆ ಡಿಕ್ಕಿ ಹೊಡೆಯಿತು. ಬಲವಾದ ಪೆಟ್ಟೇ ಆಗಿರಬೇಕು. ನಾನು ಕೂಗಲು ಪ್ರಯತ್ನಿಸಿದೆ. ಬಾಯಿಂದ ಏನೂ ಹೊರಡಲಿಲ್ಲ. ಮುಂದೆ ಏನಾಯಿತೋ ಗೊತ್ತಾಗಲಿಲ್ಲ.

ನಾನು ಕಣ್ಣು ತೆರೆದಾಗ ಬೆಳಕಾಗಿತ್ತು. ನನ್ನ ತಲೆಗೆ ಬಟ್ಟೆಯನ್ನು ಒರಟೊರಟಾಗಿ ಸುತ್ತಲಾಗಿತ್ತು. ಸೊಟ್ಟ ಕೈಯವನು ನನ್ನ ಮುಖವನ್ನು ತಣ್ಣೀರಿನಿಂದ ಒರೆಸುತ್ತಿದ್ದ. ನಾನು ಸುತ್ತ ನೋಡುತ್ತಾ ಎಲ್ಲಿದ್ದೇನೆ, ಏನಾಯಿತು ಎಂದು ನೆನಪಿಸಿಕೊಳ್ಳಲು ಪ್ರಯತ್ನಿಸಿದರೂ ಏನೂ ಹೊಳೆಯಲಿಲ್ಲ. ಸ್ವಲ್ಪ ದೂರದಲ್ಲಿ ಕುಳಿತಿದ್ದ ಮುದುಕಿ ಯಾವುದೋ ಸಣ್ಣ ಬಾಟಲಿಯಿಂದ ಲೋಟಕ್ಕೆ ಯಾವುದೋ ಔಷಧಿ ಹುಯ್ಯುತ್ತಿದ್ದಳು. ಅವಳ ಕಣ್ಣುಗಳಲ್ಲಿ ಆತಂಕ ಎದ್ದು ಕಾಣುತ್ತಿತ್ತು.

''ನನಗೆ ಏನಾಯ್ತು? ಇಲ್ಲಿ ಹೇಗೆ ಬಂದೆ? ಒಂದೂ ಅರ್ಥವಾಗುತ್ತಿಲ್ಲ...'' ಎಂದೆ ಆಶ್ಚರ್ಯದಿಂದ.

ಅವರು ಹಿಂದಿನ ರಾತ್ರಿ ನಡೆದ ಘಟನೆಯನ್ನು ವಿವರಿಸುತ್ತಾ, ''ಬೆಳಗಿನ ಜಾವ ನಿನ್ನನ್ನು ಈ ಸ್ಥಿತಿಯಲ್ಲಿ ಕಂಡು ಕೆಳಗೆ ಇಳಿಸಿಕೊಂಡು ಬಂದೆವು.'' ಎಂದರು.

ನನಗೆ ಒಮ್ಮೆಲೇ ಎಲ್ಲವೂ ಅರ್ಥವಾಯಿತು. ಹಿಂದಿನ ರಾತ್ರಿ ನಾನು ಕಂಡಿದ್ದ ನಿಸ್ತೇಜ ಮುಖದ ಘಾಟಿ ಮುದುಕಿ ಈಗ ಮೃದು ಸ್ವಭಾವದವಳಂತೆ ಕಾಣತೊಡಗಿದಳು. ಅವರು ಮೂವರೂ ಅಷ್ಟೇ! ವಿಕ್ಷಿಪ್ತರಂತೆ ಕಾಣಿಸುತ್ತಿರಲಿಲ್ಲ. ಎಲ್ಲಾ ಸಾಮಾನ್ಯ ಮುದುಕರಂತೆಯೇ ಕಾಣಿಸತೊಡಗಿದರು. ನಾನೇ ತಪ್ಪಾಗಿ ಅವರನ್ನು ಅಂದಾಜಿಸಿರಬೇಕು!

''ಆ ಕೆಂಪುಕೋಣೆಯಲ್ಲಿ ದೆವ್ವವಿರುವುದನ್ನು ಈಗಲಾದರೂ ನಂಬುತ್ತೀಯಾ ಮಗಾ?'' ಸೊಟ್ಟ ಕೈಯ ಮುದುಕ ಕೇಳಿದ. ಅವನ ತುಟಿಯಂಚಿನಲ್ಲಿ ಒಂದು ಕಿರು ನಗೆ ಮೂಡಿತ್ತು. ಅದು ಖಂಡಿತ ಕುಹಕ ನಗೆಯಾಗಲಿರಲಿಲ್ಲ.

''ಹೌದು ಅಜ್ಜ. ಆ ಕೋಣೆಯಲ್ಲಿ ದೆವ್ವವಿದೆ.'' ನಾನೆಂದೆ.

''ಅಂತೂ. ನೀನು ಅದೃಷ್ಟವಂತ! ನಾವು ಜೀವಮಾನವನ್ನೆಲ್ಲಾ ಇಲ್ಲಿ ಸವೆಸಿಯೂ ಆ ದೆವ್ವದ ಬಗ್ಗೆ ಕೇಳಿದ್ದೇವೆಯೇ ಹೊರತು ನೋಡಿಲ್ಲ. ನೋಡಲು ಹೋಗುವಷ್ಟು ಧೈರ್ಯವೂ ನಮಗೆ ಇರಲಿಲ್ಲ ಬಿಡು. ಅಂದ್ಹಾಗೆ ನೀನು ನೋಡಿದ್ದ ದೆವ್ವ 'ಅರ್ಲ್'(ರಾಜಮನೆತನದವನು)ನದು ತಾನೆ?''